ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ"

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 (2ಎ) ರಡಿ]

ವಿಷಯ: **ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ದೊಡ್ಡತುಮಕೂರು ಗ್ರಾಮದ ಸರ್ವೆ ನಂ. 5/1 ರಲ್ಲಿ (0-38ಗು), 5/2 ರಲ್ಲಿ (0-29ಗು), 5/3 ರಲ್ಲಿ (1ಎ), 5/5 (ಹಳೇ ಸ.ನಂ. 5/3) ರಲ್ಲಿ (1ಎ-07ಗು), 5/6 (ಹಳೇ ಸ.ನಂ. 5/1) ರಲ್ಲಿ (0ಎ-38ಗು), 5/7 (ಹಳೇ ಸ.ನಂ. 5/1) ರಲ್ಲಿ (0ಎ-20ಗು), 5/8 (ಹಳೇ ಸ.ನಂ. 5/1) ರಲ್ಲಿ (0ಎ-39ಗು), 5/10 (ಹಳೇ ಸ.ನಂ. 5/1) ರಲ್ಲಿ (0ಎ-36ಗು), 71/1 ರಲ್ಲಿ (0-34½ಗು), 71/2 ರಲ್ಲಿ (1ಎ-16ಗು), 71/6 ರಲ್ಲಿ (0-05¼ಗು), 71/8 ರಲ್ಲಿ (0-05½ಗು), 71/10 ರಲ್ಲಿ (0-34½ಗು), 71/11 ರಲ್ಲಿ (1ಎ-16¾ಗು), 71/12 ರಲ್ಲಿ (1ಎ-05¾ಗು), 71/13 ರಲ್ಲಿ (0-13¼ಗು), 71/14 ರಲ್ಲಿ (0-05½ಗು) ಮತ್ತು 72/2 ರಲ್ಲಿ (0-28ಗು) ಒಟ್ಟು 14ಎಕರೆ 12ಗುಂಟೆ ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.**

ಉಲ್ಲೇಖ:
1. ಮನೋಜೀವ ಪ್ರಾಪರ್ಟೀಸ್ ಎಲ್‌ಎಲ್‌ಪಿ. ರ ಪರವಾಗಿ ಶ್ರೀ ಕೆ.ಎನ್. ಸುರೇಂದ್ರ [ಶ್ರೀ ಎನ್.ಎಂ. ಮುದ್ದಪ್ಪ ಮತ್ತು ಎನ್.ಎಂ. ಮುತ್ತಪ್ಪ ಬಿನ್ ಲೇಟ್॥ ಎನ್.ಎಸ್. ಮುತ್ತಣ್ಣ ಮತ್ತು ಶ್ರೀ ತಿರುಪತಿರೆಡ್ಡಿ ಬಿನ್ ಬಿ. ನಾರಾಯಣ ರೆಡ್ಡಿ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು] ಇವರು ಸಲ್ಲಿಸಿರುವ ಮನವಿ ಅರ್ಜಿ ದಿನಾಂಕ: 18-02-2021
2. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳು
   ಎ) ಸಂಖ್ಯೆ 170455, ದಿನಾಂಕ: 13-08-2020 (ಸರ್ವೆ ನಂ. 5/1)
   ಬಿ) ಸಂಖ್ಯೆ 205458, ದಿನಾಂಕ: 15-02-2021 (ಸರ್ವೆ ನಂ. 5/2)
   ಸಿ) ಸಂಖ್ಯೆ 150855, ದಿನಾಂಕ: 23-03-2020 (ಸರ್ವೆ ನಂ. 5/3)
   ಡಿ) ಸಂಖ್ಯೆ 170454, ದಿನಾಂಕ: 13-08-2020 [ಸರ್ವೆ ನಂ. 5/5 (ಹ.ಸ.ನಂ. 5/1)]
   ಇ) ಸಂಖ್ಯೆ 150853, ದಿನಾಂಕ: 23-03-2020 [ಸರ್ವೆ ನಂ. 5/6 (ಹ.ಸ.ನಂ. 5/1)]
   ಎಫ್) ಸಂಖ್ಯೆ 150858, ದಿನಾಂಕ:23-03-2020 [ಸರ್ವೆ ನಂ. 5/7 (ಹ.ಸ.ನಂ. 5/1)]
   ಜಿ) ಸಂಖ್ಯೆ 191323, ದಿನಾಂಕ:07-11-2020 [ಸರ್ವೆ ನಂ. 5/8 (ಹ.ಸ.ನಂ. 5/1)]
   ಹೆಚ್) ಸಂಖ್ಯೆ 170453, ದಿನಾಂಕ:13-08-2020 [ಸರ್ವೆ ನಂ. 5/10 (ಹ.ಸ.ನಂ. 5/1)]
   ಐ) ಸಂಖ್ಯೆ 31889, ದಿನಾಂಕ: 27-12-2019 (ಸರ್ವೆ ನಂ. 71/1)
   ಜೆ) ಸಂಖ್ಯೆ 152609, ದಿನಾಂಕ: 23-03-2020 (ಸರ್ವೆ ನಂ. 71/2)
   ಕೆ) ಸಂಖ್ಯೆ 31896, ದಿನಾಂಕ: 27-12-2019 (ಸರ್ವೆ ನಂ. 71/6)
   ಎಲ್) ಸಂಖ್ಯೆ 191316, ದಿನಾಂಕ: 07-11-2020 (ಸರ್ವೆ ನಂ. 71/8)
   ಎಂ) ಸಂಖ್ಯೆ 31892, ದಿನಾಂಕ: 27-12-2019 (ಸರ್ವೆ ನಂ. 71/10)
   ಎನ್) ಸಂಖ್ಯೆ 31898, ದಿನಾಂಕ: 27-12-2019 (ಸರ್ವೆ ನಂ. 71/11)
   ಒ) ಸಂಖ್ಯೆ 31894, ದಿನಾಂಕ: 27-12-2019 (ಸರ್ವೆ ನಂ. 71/12)
   ಪಿ) ಸಂಖ್ಯೆ 31899, ದಿನಾಂಕ: 27-12-2019 (ಸರ್ವೆ ನಂ. 71/13)
   ಕ್ಯೂ) ಸಂಖ್ಯೆ 150852, ದಿನಾಂಕ: 23-03-2020 (ಸರ್ವೆ ನಂ. 71/14)
   ಆರ್) ಸಂಖ್ಯೆ 31891, ದಿನಾಂಕ: 27-12-2019 (ಸರ್ವೆ ನಂ. 72/2)



E-mail :dpa.dbpura2018@gmail.com

Website : www.doddaballapura.tpa.gov.in

3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶ ಸಂಖ್ಯೆ: CTE-323877-PCB-ID-98882 ದಿನಾಂಕ: 23-02-2021
4. ದಿನಾಂಕ: 23-02-2021 ರಂದು ನಡೆದ ಪ್ರಾಧಿಕಾರದ ಹತ್ತನೇ (10) ಸಭೆಯ ವಿಷಯ ಸಂಖ್ಯೆ: 10.30 ರ ನಿರ್ಣಯ.
5. ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 01-03-2021
6. ಅರ್ಜಿದಾರರು ದಿನಾಂಕ: 05-03-2021 ರ ಮನವಿ ಪತ್ರದೊಂದಿಗೆ ದಿನಾಂಕ: 04-03-2021 ರ ಕೆನರಾ ಬ್ಯಾಂಕ್, ಆರ್ ಪಿಸಿ ಲೇಔಟ್ ವಿಜಯನಗರ ಶಾಖೆ, ಬೆಂಗಳೂರು ಇಲ್ಲಿನ ಡಿ.ಡಿ. ಸಂಖ್ಯೆ: 196236, 196235, 196237, 196238, 196239 ಮತ್ತು 196240 ಗಳಲ್ಲಿ ಕ್ರಮವಾಗಿ ಶುಲ್ಕ ರೂ.304900/-, 1447000/-, 448320/-, 448320/-, 224160/- ಮತ್ತು 1120800/- ಗಳಂತೆ ಒಟ್ಟು ರೂ. 39,93,500-00 ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಪ್ರಾಧಿಕಾರದ ರಸೀದಿ ಸಂಖ್ಯೆ: 883, 884, 885, 886, 887 ಮತ್ತು 888 ದಿನಾಂಕ: 06-03-2021 ರಲ್ಲಿ ದಾಖಲಿಸಲಾಗಿದೆ.
7. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದೊಡ್ಡಬಳ್ಳಾಪುರ ತಾಲ್ಲೂಕು ರವರ ಪತ್ರ ಸಂಖ್ಯೆ : ಭೂ.ಸ.ನಿ/ಜನ/ಅರ್ಜಿ/20/20-21 ದಿನಾಂಕ: 09-04-2021.
8. ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 23-04-2021
9. ಉಪನೋಂದಣಾಧಿಕಾರಿಗಳು, ದೊಡ್ಡಬಳ್ಳಾಪುರ ರವರ 1ನೇ ಪುಸ್ತಕದ ದಸ್ತಾವೇಜು ನಂ. DBP-1-01860-2021-22 ಆಗಿ ಸಿ.ಡಿ. ನಂಬರ್ DBPD 1058 ನೇ ದ್ದರಲ್ಲಿ ದಿನಾಂಕ: 11-06-2021 ರಂದು ಉದ್ಯಾನವನ ಮತ್ತು ರಸ್ತೆ ಜಾಗಗಳ ನೋಂದಾಯಿಸಿರುವ ಪರಿತ್ಯಾಜನಾ ಪತ್ರ.
10. ಉಪನೋಂದಣಾಧಿಕಾರಿಗಳು, ದೊಡ್ಡಬಳ್ಳಾಪುರ ರವರ 1ನೇ ಪುಸ್ತಕದ ದಸ್ತಾವೇಜು ನಂ. DBP-1-01863-2021-22 ಆಗಿ ಸಿ.ಡಿ. ನಂಬರ್ DBPD 1058 ನೇ ದ್ದರಲ್ಲಿ ದಿನಾಂಕ: 16-06-2021 ರಂದು ನಾಗರೀಕ ಸೌಲಭ್ಯ ಜಾಗವನ್ನು ನೋಂದಾಯಿಸಿರುವ ಪರಿತ್ಯಾಜನಾ ಪತ್ರ
11. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಓಹೆಚ್:109:ಕೆಹೆಚ್‌ಬಿ2017 ದಿ:10-07-2017

*****

**ಮನೋಜೀವ ಪ್ರಾಪರ್ಟೀಸ್ ಎಲ್‌ಎಲ್‌ಪಿ.** ರ ಪರವಾಗಿ **ಶ್ರೀ ಕೆ.ಎನ್. ಸುರೇಂದ್ರ** [ಶ್ರೀ ಎನ್.ಎಂ. ಮುದ್ದಪ್ಪ ಮತ್ತು ಎನ್.ಎಂ. ಮುತ್ತಪ್ಪ ಬಿನ್ ಲೇಟ್‌॥ ಎನ್.ಎಸ್. ಮುತ್ತಣ್ಣ ಮತ್ತು ಶ್ರೀ ತಿರುಪತಿರೆಡ್ಡಿ ಬಿನ್ ಬಿ. ನಾರಾಯಣ ರೆಡ್ಡಿ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು] ಇವರು ಉಲ್ಲೇಖ (1) ರನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ದೊಡ್ಡತುಮಕೂರು ಗ್ರಾಮದ ಸರ್ವೆ ನಂ. 5/1 ರಲ್ಲಿ (0-38ಗು), 5/2 ರಲ್ಲಿ (0-29ಗು), 5/3 ರಲ್ಲಿ (1ಎ), 5/5 (ಹಳೇ ಸ.ನಂ. 5/3) ರಲ್ಲಿ (1ಎ-07ಗು), 5/6 (ಹಳೇ ಸ.ನಂ. 5/1) ರಲ್ಲಿ (0ಎ-38ಗು), 5/7 (ಹಳೇ ಸ.ನಂ. 5/1) ರಲ್ಲಿ (0ಎ-20ಗು), 5/8 (ಹಳೇ ಸ.ನಂ. 5/1) ರಲ್ಲಿ (0ಎ-39ಗು), 5/10 (ಹಳೇ ಸ.ನಂ. 5/1) ರಲ್ಲಿ (0ಎ-36ಗು), 71/1 ರಲ್ಲಿ (0-34½ಗು), 71/2 ರಲ್ಲಿ (1ಎ-16ಗು), 71/6 ರಲ್ಲಿ (0-05¼ಗು), 71/8 ರಲ್ಲಿ (0-05½ಗು), 71/10 ರಲ್ಲಿ (0-34½ಗು), 71/11 ರಲ್ಲಿ (1ಎ-16¾ಗು), 71/12 ರಲ್ಲಿ (1ಎ-05¾ಗು), 71/13 ರಲ್ಲಿ (0-13¼ಗು), 71/14 ರಲ್ಲಿ (0-05½ಗು) ಮತ್ತು 72/2 ರಲ್ಲಿ (0-28ಗು) **ಒಟ್ಟು 14ಎಕರೆ 12ಗುಂಟೆ** ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುತ್ತಾರೆ.

ಈ ಸಂಬಂಧ ಅರ್ಜಿದಾರರು ಸಲ್ಲಿಸಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನುಗಳಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಉಲ್ಲೇಖ (2) ರ ಅಧಿಕೃತ ಜ್ಞಾಪನ ಪತ್ರಗಳನ್ವಯ 'ವಸತಿ' ಉದ್ದೇಶಕ್ಕಾಗಿ ಭೂ ಪರಿವರ್ತನೆಗೊಳಿಸಲಾಗಿರುತ್ತದೆ.

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

ಉಲ್ಲೇಖ (3) ರಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿರವರು Consent For Establishment (CFE) ಅನ್ನು ಹೊರಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಉಲ್ಲೇಖ (4) ರ ದಿನಾಂಕ: 23-02-2021 ರಂದು ನಡೆದ ಪ್ರಾಧಿಕಾರದ ಹತ್ತನೇ (10) ಸಭೆಯ ವಿಷಯ ಸಂಖ್ಯೆ: 10.30 ರಲ್ಲಿ ಮಂಡಿಸಿ ಚರ್ಚಿಸಲಾಗಿ, ನಡವಳಿಕೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ದೊಡ್ಡತುಮಕೂರು ಗ್ರಾಮದ ಸರ್ವೆ ನಂ. 5/1 ರಲ್ಲಿ (0-38ಗು), 5/2 ರಲ್ಲಿ (0-29ಗು), 5/3 ರಲ್ಲಿ (1ಎ), 5/5 (ಹಳೇ ಸ.ನಂ. 5/3) ರಲ್ಲಿ (1ಎ-07ಗು), 5/6 (ಹಳೇ ಸ.ನಂ. 5/1) ರಲ್ಲಿ (0ಎ-38ಗು), 5/7 (ಹಳೇ ಸ.ನಂ. 5/1) ರಲ್ಲಿ (0ಎ-20ಗು), 5/8 (ಹಳೇ ಸ.ನಂ. 5/1) ರಲ್ಲಿ (0ಎ-39ಗು), 5/10 (ಹಳೇ ಸ.ನಂ. 5/1) ರಲ್ಲಿ (0ಎ-36ಗು), 71/1 ರಲ್ಲಿ (0-34½ಗು), 71/2 ರಲ್ಲಿ (1ಎ-16ಗು), 71/6 ರಲ್ಲಿ (0-05¼ಗು), 71/8 ರಲ್ಲಿ (0-05½ಗು), 71/10 ರಲ್ಲಿ (0-34½ಗು), 71/11 ರಲ್ಲಿ (1ಎ-16¾ಗು), 71/12 ರಲ್ಲಿ (1ಎ-05¾ಗು), 71/13 ರಲ್ಲಿ (0-13¼ಗು), 71/14 ರಲ್ಲಿ (0-05½ಗು) ಮತ್ತು 72/2 ರಲ್ಲಿ (0-28ಗು) **ಒಟ್ಟು 14ಎಕರೆ 12ಗುಂಟೆ** ವಿಸ್ತೀರ್ಣ ಪ್ರದೇಶದ "ವಸತಿ" ಉದ್ದೇಶದ ವಿನ್ಯಾಸ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2ಎ) ರ ಅಡಿಯಲ್ಲಿ ಅನುಮೋದಿಸಲು ತೀರ್ಮಾನಿಸಲಾಗಿರುತ್ತದೆ. ಈ ಸಂಬಂಧ ಮುಂದಿನ ಕ್ರಮವಹಿಸಿ ಉಲ್ಲೇಖ (5) ರ ಪ್ರಾಧಿಕಾರದ ಪತ್ರದಲ್ಲಿ ಶುಲ್ಕ ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿರುವಂತೆ ಉಲ್ಲೇಖ (6) ರಲ್ಲಿ ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕಗಳನ್ನು ಪಾವತಿಸಿರುತ್ತಾರೆ. ಉಲ್ಲೇಖ (7) ರನ್ವಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಪ್ರಸ್ತಾಪಿತ ಜಮೀನುಗಳಿಗೆ ಜಂಟಿ ಸರ್ವೆ ನಕ್ಷೆಯನ್ನು ದೃಢೀಕರಿಸಿರುತ್ತಾರೆ. ಸದರಿ ನಕ್ಷೆಗನುಗುಣವಾಗಿ ಉಲ್ಲೇಖ (8) ರಲ್ಲಿ ಸ್ಥಳದಲ್ಲಿ ಗಡಿಗುರುತಿಸಲು Demarcation ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಅದರಂತೆ, ಸ್ಥಳದಲ್ಲಿ ಗಡಿಗುರುತು ಅಳವಡಿಸಲಾಗಿರುವಂತೆ ಮುಂದಿನ ಕ್ರಮವಹಿಸಿ ನಕ್ಷೆಯಲ್ಲಿ ಅಳವಡಿಸಲಾದ ಸಾರ್ವಜನಿಕ ಉಪಯೋಗದ ಉದ್ಯಾನವನ ಹಾಗೂ ರಸ್ತೆಗಳ ಜಾಗಗಳನ್ನು ಉಲ್ಲೇಖ (9) ರಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡತುಮಕೂರು ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು ಹಾಗೂ ನಾಗರೀಕ ಸೌಲಭ್ಯ ನಿವೇಶನಗಳನ್ನು ಉಲ್ಲೇಖ (10) ರಲ್ಲಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ ಇವರಿಗೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುತ್ತದೆ. ಆದ್ದರಿಂದ, ಈ ಮೇಲಿನ ಉಲ್ಲೇಖಿತ ಎಲ್ಲಾ ಅಂಶಗಳನ್ವಯ ಪ್ರಸ್ತಾವನೆಗೆ ಈ ಕೆಳಗಿನಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

## ಆದೇಶ

**ಸಂಖ್ಯೆ: DPA/TP/LAO/13/2020-21**/134 ದಿನಾಂಕ: 21 JUN 2021

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ದೊಡ್ಡತುಮಕೂರು ಗ್ರಾಮದ ಸರ್ವೆ ನಂ. 5/1 ರಲ್ಲಿ (0-38ಗು), 5/2 ರಲ್ಲಿ (0-29ಗು), 5/3 ರಲ್ಲಿ (1ಎ), 5/5 (ಹಳೇ ಸ.ನಂ. 5/3) ರಲ್ಲಿ (1ಎ-07ಗು), 5/6 (ಹಳೇ ಸ.ನಂ. 5/1) ರಲ್ಲಿ (0ಎ-38ಗು), 5/7 (ಹಳೇ ಸ.ನಂ. 5/1) ರಲ್ಲಿ (0ಎ-20ಗು), 5/8 (ಹಳೇ ಸ.ನಂ. 5/1) ರಲ್ಲಿ (0ಎ-39ಗು), 5/10 (ಹಳೇ ಸ.ನಂ. 5/1) ರಲ್ಲಿ (0ಎ-36ಗು), 71/1 ರಲ್ಲಿ (0-34½ಗು), 71/2 ರಲ್ಲಿ (1ಎ-16ಗು), 71/6 ರಲ್ಲಿ (0-05¼ಗು), 71/8 ರಲ್ಲಿ (0-05½ಗು), 71/10 ರಲ್ಲಿ (0-34½ಗು), 71/11 ರಲ್ಲಿ (1ಎ-16¾ಗು), 71/12 ರಲ್ಲಿ (1ಎ-05¾ಗು), 71/13 ರಲ್ಲಿ (0-13¼ಗು), 71/14 ರಲ್ಲಿ (0-05½ಗು) ಮತ್ತು 72/2 ರಲ್ಲಿ (0-28ಗು) **ಒಟ್ಟು 14ಎಕರೆ 12ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯಲ್ಲಿ ವಸತಿಗಾಗಿ ವಿಸ್ತೀರ್ಣ - 31607.23 ಚ.ಮೀ (54.62%), ಉದ್ಯಾನವನ ವಿಸ್ತೀರ್ಣ - 5788.22 ಚ.ಮೀ (10.00%), ನಾಗರೀಕ ಸೌಲಭ್ಯ ವಿಸ್ತೀರ್ಣ - 2898.16 ಚ.ಮೀ (05.01%) ಮತ್ತು ರಸ್ತೆಗಳಿಗಾಗಿ ವಿಸ್ತೀರ್ಣ - 17575.63 ಚ.ಮೀ (30.37%) ಯೊಂದಿಗೆ ನಿವೇಶನಗಳಲ್ಲಿ ಅಳತೆ 9.14 ಮೀ. x 12.19 ಮೀ. ನ ಒಂದು ನೂರ ಇಪ್ಪತ್ತೆಂಟು (128), 9.14 ಮೀ. x 13.72 ಮೀ. ನ ಇಪ್ಪತ್ತೆರಡು (22), 9.14 ಮೀ. x 15.24 ಮೀ. ನ ಹದಿಮೂರು (13), 12.19 ಮೀ. x 18.29 ಮೀ. ನ ಹನ್ನೆರಡು (12) ಮತ್ತು ಅನಿಯತದಲ್ಲಿ ಎಪ್ಪತ್ತಾರು (76) **ಒಟ್ಟು ಇನ್ನೂರ ಐವತ್ತೊಂದು (251) ನಿವೇಶನಗಳನ್ನು** ಅಳವಡಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರ ಅಡಿಯಲ್ಲಿ ಪ್ರಸ್ತಾಪಿತ



E-mail :dpa.dbpura2018@gmail.com

Website : www.doddaballapura.tpa.gov.in

ಪ್ರದೇಶದಲ್ಲಿ ಕಂದಾಯ ನಕ್ಷೆಯಂತೆ ಗಡಿ ಗುರುತುಗಳೊಂದಿಗೆ, ಮೂಲಭೂತ ಸೌಕರ್ಯಗಳಾದ ನಾಲೆಗಳು, ಒಳಚರಂಡಿ, ರಸ್ತೆ, ಮೋರಿ ನಿರ್ಮಾಣ, ವಿದ್ಯುತ್ ಸರಬರಾಜು ವ್ಯವಸ್ಥೆ ಹಾಗೂ ನೀರು ಸರಬರಾಜು ವ್ಯವಸ್ಥೆ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಸಂಬಂಧಪಟ್ಟ ಇಲಾಖಾ ನಿಯಮಾವಳಿಗನುಗುಣವಾಗಿ ಅಭಿವೃದ್ಧಿಪಡಿಸಲು ಹಾಗೂ ರಸ್ತೆ ಪಂಕ್ತೀಕರಣ– ಗೊಳಿಸಿ, ಉದ್ಯಾನವನ, ನಾಗರೀಕ ಸೌಲಭ್ಯ ಪ್ರದೇಶಗಳನ್ನು ಗುರುತಿಸಿ ಸೂಕ್ತ ಫೆನ್ಸಿಂಗ್‌ನೊಂದಿಗೆ ಸಂರಕ್ಷಿಸಲು ಮಾತ್ರ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದೆ.

<u>ಷರತ್ತುಗಳು</u>

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿ ಕಾರ್ಯಗಳಾದ ರಸ್ತೆ ನಿರ್ಮಾಣ, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಒಳಚರಂಡಿಗಳ ನಿರ್ಮಾಣ, ಮೋರಿ ನಿರ್ಮಾಣ, ಪಾದಾಚಾರಿ ವ್ಯವಸ್ಥೆ, ಬೀದಿದೀಪದ ವ್ಯವಸ್ಥೆ ಮತ್ತು ಕುಡಿಯುವ ನೀರು ಸರಬರಾಜು ವ್ಯವಸ್ಥೆಗಳನ್ನೊಳಗೊಂಡ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನ ಹಾಗೂ ನಾಗರೀಕ ಸೌಲಭ್ಯ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಿಸಿ ಮೂಲ ಸೌಕರ್ಯಗಳನ್ನು ಸಂಬಂಧಪಟ್ಟ ಇಲಾಖಾ ನಿಯಮಾವಳಿಗಳಂತೆ ಅಭಿವೃದ್ಧಿಪಡಿಸಲು ತಾತ್ಕಾಲಿಕವಾಗಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.
3) ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಅನುಮೋದಿತ ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ ಪೂರ್ಣಗೊಳಿಸತಕ್ಕದ್ದು. ಸದರಿ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ಮಂಡಳಿ/ಇಲಾಖೆಯಿಂದ ಸ್ಥಳದಲ್ಲಿ ಅಭಿವೃದ್ಧಿ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಡ್ಡಾಯವಾಗಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17 (2ಬಿ) ರಂತೆ ಸದರಿ ನಕ್ಷೆಗೆ ಅಂತಿಮ ಅನುಮೋದನೆ ಪಡೆಯದ ಹೊರತಾಗಿ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ.**
4) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ ಎರಡು (02) ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.
5) **ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ ಹಾಗೂ ನಿವೇಶನಗಳಲ್ಲಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಅಥವಾ ಪರವಾನಿಗೆ ಹೊರಡಿಸತಕ್ಕದ್ದಲ್ಲ.**
6) ಪ್ರಶ್ನಿತ ಜಮೀನಿನಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
7) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.
8) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.
9) ಸದರಿ ನಿವೇಶನದಲ್ಲಿ ಕಡ್ಡಾಯವಾಗಿ ಯಾವುದೇ ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.

10) ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಕಾಲಕಾಲಕ್ಕೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ಪಾವತಿಸುವ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

11) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಾಗಿ ಸಂಬಂಧಿಸಿದ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಲೋಕೋಪಯೋಗಿ ಇಲಾಖೆ/ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

12) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಾಗಿ ಸಂಬಂಧಿಸಿದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

13) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಾಗಿ ಸಂಬಂಧಿಸಿದ ವಿದ್ಯುಧ್ಧೀಕರಣ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

14) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

15) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಲಾದ ಉದ್ಯಾನವನ ಅಭಿವೃದ್ಧಿಯನ್ನು ತೋಟಗಾರಿಕಾ ಇಲಾಖೆಯ ಉಸ್ತುವಾರಿಯಲ್ಲಿ ಅಭಿವೃದ್ಧಿಗೊಳಿಸಿ ಅಭಿವೃದ್ಧಿ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

16) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

17) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳೆಸುವುದು.

18) ತಾತ್ಕಾಲಿಕ ಅನುಮೋದಿತ ವಸತಿವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

19) ವಿನ್ಯಾಸದಲ್ಲಿ ಅಳವಡಿಸಲಾದ ರಸ್ತೆಗಳು ಸಾರ್ವಜನಿಕ ರಸ್ತೆಗಳಾಗಿದ್ದು, ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

20) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯಗಳು ಹಾಗೂ ಇತರೆ ನ್ಯಾಯಾಲಯ ಪ್ರಕರಣಗಳಿಗೆ ಅರ್ಜಿದಾರರೇ ನೇರ ಹೊಣೆಗಾರರಾಗಿರುತ್ತಾರೆ. ಹೊರತಾಗಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

21) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವ ದಾಖಲಾತಿಗಳ ಬಗ್ಗೆ ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅನುಮೋದನೆ ಪಡೆದಿರುವುದು ಸ್ಪಷ್ಟಪಟ್ಟಲ್ಲಿ, ನೀಡಿರುವ ಅನುಮೋದನೆಯು ತನ್ನಿಂತಾನೆ ರದ್ದುಗೊಳ್ಳುತ್ತದೆ. ಹಾಗೂ ಇದಕ್ಕೆ ಯೋಜನಾ ಪ್ರಾಧಿಕಾರವು ಯಾವುದೇ ರೀತಿಯಲ್ಲಿಯೂ ಜವಾಬ್ದಾರಿಯಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

22) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

23) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31.03.2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

24) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಚಿಸಿರುವ Direction under section 18(1)(b) of Water (Prevention & Control of Pollution) Act, 1974ರ ಕಾಯ್ದೆಯಲ್ಲಿ ರೂಪಿಸಿರುವ ನಿಯಮದಂತೆ ಕ್ರಮ ಕೈಗೊಳ್ಳಲು ಸೂಚಿರುವಂತೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾವತಿಸಲು ಸೂಚಿಸಲಾಗಿದೆ.

   i. ರಾಜ ಕಾಲುವೆಯನ್ನು ಮುಚ್ಚದಂತೆ ಕ್ರಮವಹಿಸುವುದು.
   ii. ರಾಜಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.
   iii. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ/ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಕ್ರವಹಿಸುವುದು.
   iv. ರಾಜ ಕಾಲುವೆಗಳು Silt ಆಗದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.

25) ಉಲ್ಲೇಖ (11) ರ ಅಧಿಸೂಚನೆಯಂತೆ ರೇರಾ ನಿಯಮಾವಳಿಯಂತೆ ನೋಂದಾಯಿಸಿಕೊಂಡು ಮುಂದಿನ ಕ್ರಮವಹಿಸಿ ವ್ಯವಹರಿಸತಕ್ಕದ್ದು.

ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

21/06/2021

**ಸದಸ್ಯ ಕಾರ್ಯದರ್ಶಿಗಳು,**
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ದೊಡ್ಡಬಳ್ಳಾಪುರ. 21/06/21

<u>**ಲಗತ್ತು:**</u> ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

**ಇವರಿಗೆ,**
**ಮನೋಜೀವ ಪ್ರಾಪರ್ಟೀಸ್ ಎಲ್‌ಎಲ್‌ಪಿ. ರ**
**ಪರವಾಗಿ ಶ್ರೀ ಕೆ.ಎನ್. ಸುರೇಂದ್ರ**
[ಶ್ರೀ ಎನ್.ಎಂ. ಮುದ್ದಪ್ಪ ಮತ್ತು ಎನ್.ಎಂ. ಮುತ್ತಪ್ಪ
ಬಿನ್ ಲೇಟ್॥ ಎನ್.ಎಸ್. ಮುತ್ತಣ್ಣ ಮತ್ತು
ಶ್ರೀ ತಿರುಪತಿರೆಡ್ಡಿ ಬಿನ್ ಬಿ. ನಾರಾಯಣ ರೆಡ್ಡಿ ರವರುಗಳ
ಪರವಾಗಿ ನೋಂದಾಯಿತ ಜಿಪಿಎದಾರರು]
ನಂ. 1125/12, 1 ನೇ ಮಹಡಿ, ಸರ್ವಿಸ್ ರಸ್ತೆ,
ಹಂಪಿನಗರ, 2ನೇ ಸ್ಟೇಜ್, ವಿಜಯನಗರ,
ಬೆಂಗಳೂರು – 560104.